




ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿದ್ದು, ಅದನ್ನು ತಾರಸಿ ಸೋಲಾರ್ ಪ್ಯಾನೆಲ್‌ಗೆ ಜೋಡಿಸಿಕೊಂಡರೆ ಮನೆಗೆ ಬೇಕಾದ ವಿದ್ಯುತ್ ವರ್ಷಪೂರ್ತಿ ದೊರೆಯುತ್ತದೆ.

ಬೆಂಗಳೂರಿನ ಬಹುತೇಕ ಮಳಿಗೆಗಳ ಮೇಲೆ ಸೋಲಾರ್ ಹೀಟರ್‌ಗಳಿವೆ. ತಿರುಪತಿ, ಶೃಂಗೇರಿ, ಶಿರಡಿ, ಮೌಂಟ್ ಅಬುಗಳಲ್ಲಿ ಲಕ್ಷಾಂತರ ಜನ ಭಕ್ತರ ಪ್ರಸಾದ ತಯಾರಾಗುವುದು ಸೌರ ಶಕ್ತಿಯಿಂದಲೇ. ಸೌರ ಶಕ್ತಿಯಿಂದ ನಡೆಯುವ ಒಲೆ, ದೀಪ, ಲಾಟೀನು, ಕುಕ್ಕರ್, ಕಾರು, ನೀರೆತ್ತುವ ಪಂಪು, ಕ್ಯಾಲ್ಕುಲೇಟರ್, ವಾಚ್, ಜನತಾ ಎಟಿಎಂ, ಮೊಬೈಲ್ ಚಾರ್ಜರ್, ಬೈಕುಗಳನ್ನೆಲ್ಲ ನಿರ್ಮಿಸಿ ಬಳಸುತ್ತಿದ್ದೇವೆ.

ಸೌರ ವಿದ್ಯುತ್ತನ್ನು ಸ್ಥಳೀಯವಾಗಿ ಉತ್ಪಾದಿಸಬಹುದಾದ್ದರಿಂದ ಉತ್ಪಾದನಾ ವೆಚ್ಚವೂ ಕಡಿಮೆ ಹಾಗೂ ಸರಬರಾಜಿನಲ್ಲಿ ಸೋರಿಕೆಯೂ ಇರುವುದಿಲ್ಲ. ಇವುಗಳಿಂದ ದೊರೆಯುವ ವಿದ್ಯುತ್‌ನ ಯುನಿಟ್ ದರ ಕಲ್ಲಿದ್ದಲಿನಿಂದ ಸಿಗುವ ವಿದ್ಯುತ್‌ನ ದರಕ್ಕಿಂತ ಶೇ. 40ರಷ್ಟು ಕಡಿಮೆ. ಎಲ್ಲೆಲ್ಲೂ ಬಿಸಿಲು ಪುಕ್ಕಟೆಯಾಗಿ ಸಿಗುವುದರಿಂದ ಸ್ಥಾಪಿಸಲಾದ ಸ್ಥಾವರಗಳಲ್ಲಿ, ಸ್ಥಳೀಯರಿಗೆ ಉದ್ಯೋಗ ನೀಡಿ ಆರ್ಥಿಕ ಪ್ರಗತಿಗೆ ನೆರವಾಗಬಹುದು. ಎಲ್ಲೆಂದರಲ್ಲಿಗೆ ಮಡಿಚಿ ಒಯ್ಯಬಹುದಾದ ಜಮಖಾನೆಯಂತಹ ಸ್ಥಾವರಗಳೂ ಇವೆ.

ಇನ್ನು ಮೂರೇ ವರ್ಷ. ಭಾರತಕ್ಕೆ ಬೇಕಾದ ಅರ್ಧದಷ್ಟು ವಿದ್ಯುತ್ತು ಅಕ್ಷಯ (**Renewable**) ಶಕ್ತಿ ಮೂಲಗಳಿಂದ ಸಿಗುತ್ತದೆ ಎನ್ನುವ ಅಂದಾಜು ಇದೆ.

## ಅಕ್ಷಯ ಶಕ್ತಿಯ ರಂಗ ಸ್ಥಳ

ಕರ್ನಾಟಕದ ಪಾವಗಡದಲ್ಲಿ ವಿಶ್ವದ ಅತಿದೊಡ್ಡ, 2000 ಮೆ.ವ್ಯಾ. ಸಾಮರ್ಥ್ಯದ ಸೋಲಾರ್ ಘಟಕ ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದು, 600 ಮೆ.ವ್ಯಾ. ವಿದ್ಯುತ್ತನ್ನು ರಾಜ್ಯದ ಗ್ರಿಡ್‌ಗೆ ನೀಡುತ್ತಿದೆ. 16 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ 13 ಸಾವಿರ ಎಕರೆ ಪ್ರದೇಶದಲ್ಲಿ ಸಿದ್ಧವಾಗಿರುವ ಇದನ್ನು 'ಶಕ್ತಿಸ್ಥಳ' ಎಂದು ಕರೆಯಲಾಗಿದ್ದು, ಜಪಾನಿನ ಸಾಫ್ಟ್‌ಬ್ಯಾಂಕ್ ಭಾರೀ ಬಂಡವಾಳ ಹೂಡಿದೆ. ತಮಿಳುನಾಡಿನ ರಾಮನಾಥಪುರಂನ ಕಮುತಿ ಸೌರ ವಿದ್ಯುತ್ ಸ್ಥಾವರ 648 ಮೆ.ವ್ಯಾ. ವಿದ್ಯುತ್ ನೀಡುತ್ತಿದೆ. ಚಿತ್ರದುರ್ಗ ಬಳಿಯ ತುಪ್ಪದಹಳ್ಳಿ, ಗದಗಿನ ಕಪ್ಪತಗುಡ್ಡ, ಮುಂಡರಗಿ ಹಾಗೂ ಶಿರಹಟ್ಟಿ ತಾಲ್ಲೂಕುಗಳಲ್ಲಿ ಸ್ಥಾಪಿತವಾಗಿರುವ ಪವನ ವಿದ್ಯುತ್ ಸ್ಥಾವರಗಳು ನಾಡಿನ ಮನೆ ಮನೆಗೆ ಬೆಳಕು ನೀಡುತ್ತ ದಶಕಗಳೇ ಆಗಿವೆ. ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಹಲವು ಸೌರ ವಿದ್ಯುತ್ ಉತ್ಪಾದನಾ ಘಟಕಗಳಿವೆ. ರಾಜಸ್ಥಾನದ ಭದ್ಲಾದಲ್ಲಿ ಅದಾನಿ ಕಂಪನಿಯು 10 ಸಾವಿರ ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಸ್ಥಾವರವನ್ನು 2022ರ ಅಂತ್ಯದ ವೇಳೆಗೆ ಸ್ಥಾಪಿಸಲಿದೆ.

## ಕೊನೆಯ ಮಾತು

ಎಲ್ಲ ಶಕ್ತಿ ಮೂಲಗಳೂ ಪರಿಸರದ ಮೇಲೆ ಒಂದಿಲ್ಲೊಂದು ಅಡ್ಡ ಪರಿಣಾಮಗಳನ್ನುಂಟು ಮಾಡುತ್ತವೆ. ಕೆಲವು ಹೆಚ್ಚು, ಇನ್ನು ಕೆಲವು ಕಮ್ಮಿ, ಅಷ್ಟೆ. ಹಾಗೆಂದು ಅದು ಬೇಡವೇ ಬೇಡ, ಇದೇ ಸಾಕು ಎನ್ನುವ ಸ್ಥಿತಿಯಲ್ಲಿ ಯಾವ ದೇಶವೂ ಇಲ್ಲ. ಒಂದೊಂದು ಮೂಲದಲ್ಲೂ ಇರುವ ನಕಾರಾತ್ಮಕ ಅಂಶಗಳನ್ನು ಮೀರುವುದನ್ನು ಕಲಿಯುವುದೊಂದೇ ದಾರಿ. ಅದಕ್ಕೆಂದೇ ಬಿಲ್ ಗೇಟ್ಸ್ ಈ ರೀತಿ ಹೇಳುತ್ತಾರೆ:

'ಕಾರುಗಳು ಮೊದಲ ಬಾರಿಗೆ ರಸ್ತೆಗಿಳಿದಾಗ ಅಪಘಾತಗಳು ಹೆಚ್ಚಾಗಿ ಜನರ ಪಾಲಿಗೆ ಮೃತ್ಯು ಸ್ವರೂಪ ಎನಿಸಿಬಿಟ್ಟಿದ್ದವು. ಹಾಗೆಂದು ನಾವು ಕಾರುಗಳ ಬಳಕೆಯನ್ನು ನಿಲ್ಲಿಸಲಿಲ್ಲವಲ್ಲ. ಬದಲಿಗೆ ಉನ್ನತ ತಂತ್ರಜ್ಞಾನ ಬಳಸಿ ಕಾರು ನಿರ್ಮಿಸುವುದನ್ನು ಕಲಿತೆವು ಮತ್ತು ಅಪಘಾತಗಳನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾದೆವು. ಈಗ ಡ್ರೈವರ್ ಇಲ್ಲದೆಯೂ ಚಲಿಸುವ ಕಾರು ನಿರ್ಮಿಸಿ ಅಪಘಾತ ತಡೆಯುವಲ್ಲಿ ಯಶಸ್ಸು ಕಂಡಿದ್ದೇವೆ. ಶಕ್ತಿ ಉತ್ಪಾದನೆ ಮತ್ತು ಬಳಕೆಯಲ್ಲಿ ಎದುರಾಗುವ ಅಡ್ಡಿಗಳನ್ನು ಮೀರಲು ಸಮರ್ಪಕ ಉನ್ನತ ತಂತ್ರಜ್ಞಾನ ಬೇಕಿದೆ. ಅಪಾಯಕಾರಿ ಎಂದಾಕ್ಷಣ ಬಿಟ್ಟು ಕೂಡುವುದು ಯಾವ ನ್ಯಾಯ'.

ಅಪಾಯಕರ ಎಂದು ಗೊತ್ತಿರುವ ಸಂಪನ್ಮೂಲ ಬಳಸುವಾಗ ಅಪಾಯವಾಗದಂತೆ ತಂತ್ರಜ್ಞಾನ ರೂಪಿಸಿದರೆ ಆಯಿತು ಎನ್ನುವ ಬಿಲ್ ಗೇಟ್ಸ್ ಮಾತು ಇಂಧನ ನೀತಿಗೆ ಸಂಬಂಧಿಸಿದಂತೆ ನಮಗೆ ಮಾದರಿಯಾಗಬೇಕು.

ಪ್ರತಿಕ್ರಿಯಿಸಿ: **feedback@sudha.co.in**